UASB LIBRARY
Newspaper Clippings
Pg .1 Wednesday 05-05-2021 Jai Kisan



ಮೂಡಿಗೆರೆ ಸೇವಂತಿ.. ವರ್ಷಪೂರ್ತಿ ಘಮ್ಮಂತಿ

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ನಿರಂತರವಾಗಿ ನವನವೀನ ಸಂಶೋಧನೆಗಳು ನಡೆಯುತ್ತಿವೆ. ಇತ್ತೀಚೆಗೆ ಇಲ್ಲಿನ ಪ್ರಾಧ್ಯಾಪಕ ಡಾ.ಎಸ್.ಕೆ. ನಟರಾಜ ಎಂಬುವರು ವರ್ಷಪೂರ್ತಿಯಾಗಿ ಬೆಳೆಯಬಹುದಾದ ಸೇವಂತಿಗೆ ಹೂವಿನ ತಳಿಯನ್ನು ಪಾಲಿಹೌಸ್ ಸಹಾಯದಿಂದ ಕೃತಕವಾಗಿ ಹದಿಮೂರು ವಾರಗಳ ಅಂತರದಲ್ಲಿ ಪ್ರಾಯೋಗಿಕವಾಗಿ ಬೆಳೆದು ಯಶಸ್ವಿಯಾಗಿರುವುದು ವಿಶೇಷವಾಗಿದೆ.

ಹಗಲು, ರಾತ್ರಿ ಹಾಗೂ ಮಳೆ, ಚಳಿ, ಬೇಸಿಗೆಕಾಲದ ನಿರ್ಬಂಧವಿಲ್ಲದೆ ಕಪ್ಪು ಪಾಲಿಥಿನ್ ಶೀಟ್ ಬಳಸಿ, 20 ವ್ಯಾಟ್‌ನ ಎಲ್.ಇ.ಡಿ ಬಲ್ಬ್‌ನ ಕೃತಕ ಬೆಳಕಿನ ನೆರವಿನೊಂದಿಗೆ ವರ್ಷದಲ್ಲಿ ಮೂರು ಬೆಳೆಯನ್ನು ತೆಗೆಯಬಹುದೆಂದು ಡಾ. ನಟರಾಜ ಹೇಳುತ್ತಾರೆ.

ಸಸ್ಯಾಭಿವೃದ್ಧಿ

ಸೇವಂತಿಗೆ ತಳಿಗಳು ಸಂಕರಣ ತಳಿಗಳಾಗಿದ್ದು ಬೀಜವಿರುವುದಿಲ್ಲ. ಈ ಗಿಡದ ತುದಿಯ ರೆಂಬೆಯನ್ನು ಸೂಕ್ತ ಮಾಧ್ಯಮದಲ್ಲಿ ಅಂದರೆ ಟರ್ಮಿನಲ್ ಕಟಿಂಗ್ ಪದ್ಧತಿ ಮೂಲಕ ಸಂಗ್ರಹಿಸಿ ಅದಕ್ಕೆ ಬೇರು ಬರಿಸಿ ನಾಟಿಗೆ ಬಳಸಲಾಗುತ್ತದೆ. ಇಂತಹ ಕಾಂಡವು ಬೇರು ಬರಲು ಹದಿನಾಲ್ಕು ದಿನಗಳನ್ನು ತೆಗೆದುಕೊಳ್ಳುತ್ತದೆ. ಇದನ್ನು ಬಿತ್ತನೆ ಮಾಡುವ ಪ್ರಾರಂಭದಲ್ಲಿ ಮೊದಲಿಗೆ ಒಂದು ಮೀ. ಅಂತರದ ಏರುಮಡಿ ಮಾಡಬೇಕು. ಕಾಂಪೋಸ್ಟ್ ಹಾಗೂ ಡಿಎಪಿ ಗೊಬ್ಬರವನ್ನು ಸೂಕ್ತ ಪ್ರಮಾಣದಲ್ಲಿ ಮಣ್ಣಿಗೆ ಮಿಶ್ರಣಮಾಡಬೇಕು. ಜೊತೆಗೆ ಸಪೋರ್ಟಿಂಗ್ ನೆಟ್ ಅನ್ನು ಏರುಮಡಿ ಮೇಲೆ ಹಾಕಬೇಕು. ಈ ನೆಟ್‌ಗಳು ಒಂದು ಮೀ. ಅಂತರ, ಮೂವತ್ತು ಮೀ. ಉದ್ದದಲ್ಲಿ ಲಭ್ಯವಿರುತ್ತದೆ. ಅದರಂತೆ ದಿನ್ನೆದು ಸೆಂ.ಮೀ. ಆರು ಮನೆಗಳನ್ನು ಹೊಂದಿರುತ್ತವೆ. ಹೀಗೆ ಇಲ್ಲಿ ಬೇರು ಬಿಟ್ಟಿರುವ ಸಸಿಗಳನ್ನು ಈ ಆರು ಮನೆಗಳ ಮಧ್ಯದಲ್ಲಿ ನಾಟಿಮಾಡಬೇಕು. ಒಂದು ಎಕರೆ ಪ್ರದೇಶದಲ್ಲಿ ಒಟ್ಟು ಆರವತ್ತು ಸಾವಿರ ಗಿಡಗಳನ್ನು ನಾಟಿ ಮಾಡಬಹುದಾಗಿದೆ.



ನಾಟಿಮಾಡಿದ ದಿನದಿಂದ ಗಿಡಗಳು ಸುಮಾರು 45 ಸೆ.ಮೀ ಎತ್ತರ ಬೆಳೆಯುವವರೆಗೆ ಉದ್ದ ದಿನಗಳನ್ನು ಕೃತಕವಾಗಿ ನಿರ್ಮಿಸಬೇಕು. ಅಂದರೆ ರಾತ್ರಿ ಎಂಟು ಗಂಟೆಯಿಂದ ಮಧ್ಯರಾತ್ರಿ 12 ಗಂಟೆಯ ವರೆಗೆ ಲೈಟ್ ಮೂಲಕ ಕೃತಕ ಬೆಳಕನ್ನು ಒದಗಿಸಬೇಕು. ಆ ಸಂದರ್ಭದಲ್ಲಿ ಬಲ್ಬ್‌ಗಳನ್ನು 2 ಮೀ. ಮತ್ತು 2 ಮೀ. ಅಂತರದಲ್ಲಿ ಗಿಡದಿಂದ 1.2 ಮೀ. ಎತ್ತರದಲ್ಲಿ ಎಳೆಯಬೇಕು. ಹೀಗೆ ಒದಗಿಸಲಾದ ಉಷ್ಣಾಂಶಕ್ಕೆ ಅನುಗುಣವಾಗಿ ಸುಮಾರು 30 ದಿನಗಳಲ್ಲಿ 45 ಸೆ.ಮೀ. ಎತ್ತರಕ್ಕೆ ಗಿಡಗಳು ಬೆಳೆದ ನಂತರ ಲೈಟಿಂಗ್ ವ್ಯವಸ್ಥೆಯನ್ನು ನಿಲ್ಲಿಸಬೇಕು. ತದನಂತರದಲ್ಲಿ ಬ್ಲಾಕ್ ಮಲ್ಚಿಂಗ್‌ಶೀಟ್‌ನಿಂದ ಮಧ್ಯಾಹ್ನ ಮೂರು ಗಂಟೆಯಿಂದ ಮುಚ್ಚಿ ಮರುದಿನ ಬೆಳಿಗ್ಗೆ ಏಳುಗಂಟೆಯವರೆಗೂ ಕೃತಕವಾದ ಕತ್ತಲು ವಾತಾವರಣವನ್ನು ಸೃಷ್ಟಿಸಬೇಕು.

ಕಪ್ಪು ಹೊದಿಕೆ (ಬ್ಲಾಕ್ ಮಲ್ಚಿಂಗ್ ಶೀಟ್) ಹೊದಿಸಿದ ನಂತರ ಹತ್ತು ದಿನಗಳ ಅಂತರದಲ್ಲಿ ಬಿ-9 ಎಂಬ ಬೆಳೆ ನಿಯಂತ್ರಕವನ್ನು ಒಂದು ಗ್ರಾಂ. ಅನ್ನು ಪ್ರತಿ ಲೀಟರ್ ನೀರಿನ ಅಳತೆಯಲ್ಲಿ ಮೂರು ಬಾರಿ ಸಿಂಪಡಣೆ ಮಾಡಬೇಕು. ಇದರಿಂದ ಗಿಡಗಳ ಅನವಶ್ಯಕ ಎತ್ತರ ಕಡಿಮೆಯಾಗಿ ಮೊಗ್ಗು ಒಡೆಯಲು ಅನುಕೂಲವಾಗುತ್ತದೆ. ಹೀಗೆ ಮೂವತ್ತು ದಿನಗಳ ತರುವಾಯ ಗಿಡಗಳಲ್ಲಿ ಮೊಗ್ಗುಗಳು ಕಂಡುಬರುತ್ತವೆ. ಆಂದರೆ ಪ್ರತಿಗಿಡದ ತುದಿಯಲ್ಲಿ ಕ್ರಮಬದ್ಧವಾಗಿ ಒಟ್ಟು ಐದು ಮೊಗ್ಗುಗಳಿರುತ್ತವೆ. ಇವುಗಳಲ್ಲಿನ ತುತ್ತತುದಿಯಲ್ಲಿರುವ ಮೊಗ್ಗು ಬಟಾಣಿ ಕಾಳಿನ ಗಾತ್ರದಲ್ಲಿದ್ದಾಗ ಉಳಿದ ನಾಲ್ಕು ಮೊಗ್ಗುಗಳಿಗೆ ಹಾನಿಯಾಗದಂತೆ ಮುರಿಯಬೇಕು. ಇದರಿಂದ ಉಳಿದ ನಾಲ್ಕು ಮೊಗ್ಗುಗಳು ಸಮನಾಂತರ ಹೂವುಗಳಾಗಿ ಬೆಳವಣಿಗೆ ಕಾಣಲು ಸಾಧ್ಯವಾಗುತ್ತದೆ. ಹೀಗೆ ಮೂವತ್ತು ದಿನಗಳು ಕಳೆಯುತ್ತವೆ. ಇದಾದ ನಂತರದಲ್ಲಿ ಕಪ್ಪು ಹೊದಿಕೆಯನ್ನು ತೆಗೆದು ನಿಯಮಿತವಾಗಿ ಮನೋಪೋಟ್ಯಾಷಿಯಂ ಫಾಸ್ಪೇಟ್ ಅನ್ನು ನೀಡುವುದರಿಂದ ಮೊಗ್ಗುಗಳ ಗಾತ್ರವು ಹೆಚ್ಚಾಗಲು ಸಾಧ್ಯವಾಗುತ್ತದೆ.

ಕೀಟ ನಿಯಂತ್ರಣ ಕ್ರಮ

ಸಾಮಾನ್ಯವಾಗಿ ಈ ಹೂವಿನ ಬೆಳೆಗೆ ಯಾವುದೇ ರೋಗಬಾಧೆ ಸಂಭವಿಸುವುದಿಲ್ಲ. ಆದರೆ ಕೆಲವು ಕೀಟಗಳ ಹಾವಳಿ ಹೆಚ್ಚಾಗಿರುತ್ತದೆ. ಎಲೆ ಚಿತ್ತಾರ ಹುಳು, ರಸ ಹೀರುವ ಹೇನು, ಬಿಳಿ ನೊಣಗಳ ಸಮಸ್ಯೆ ಕಂಡುಬರಬಹುದು. ಆಗ ಇಮಿದಾ ಎಂಬ ಕೀಟನಾಶಕವನ್ನು 0.5 ಮಿ.ಲೀ., ಒಂದು ಲೀಟರ್ ನೀರಿನಲ್ಲಿ ಸಿಂಪಡಿಸಿ ಹತೋಟಿಗೆ ತರಬೇಕಾಗುತ್ತದೆ. ಅದೇರೀತಿ ಅನೆಟಾಂಪ್ರಿಡ್, ಡೈಪೆಸ್‌ತುರಾಸ್ ಅನ್ನು ಒಂದು ಲೀಟರ್ ನೀರಿನಲ್ಲಿ ಒಂದು. ಮಿ.ಲೀ.ನಂತೆ ಬೆರೆಸಿ ಸಿಂಪರಣೆ ಮಾಡಬೇಕಾಗುತ್ತದೆ. ಜೊತೆಗೆ ರಾಸಾಯನಿಕ ಮೂಲಕ ನೀರಿನಲ್ಲಿ ಕರಗುವ ಗೊಬ್ಬರಗಳನ್ನು ಬಳಸುವುದು ಉತ್ತಮ ಎಂದು ಮಾಹಿತಿ ನೀಡುತ್ತಾರೆ. ಒಟ್ಟಿನಲ್ಲಿ 'ಮೂಡಿಗೆರೆಯ ನಟರಾಜನ ಸೇವಂತಿ.. ವರ್ಷಪೂರ್ತಿ ಘಮ್ಮಂತಿ..!' ಎಂಬುದು ಸಾಕಾರವಾದಂತಾಗಿದೆ.

■ ಡಾ.ಸಂಪತ್ ಬೆಟ್ಟಗೆರೆ
| 9353057067

For more information visit
University Library Website
Web - uasbagrilibindia.org
E-mail- librarian@uasbangalore.edu.in

05-05-2021
Sk Pg 10

05-05-2021 Vsv Pg 12

ಕರೋನಾ ಅಲೆಗೆ ದಿಢೀರ್ ಕುಸಿದ ರೇಷ್ಮೆಗೂಡಿನ ಬೆಲೆ

ಸೋಂಕು ನಿಯಂತ್ರಣಕ್ಕಾಗಿ ಟಫ್‌ರೂಲ್ಸ್ ಜಾರಿ | ಗೂಡಿನ ಬೆಲೆ 100 ರು. ಇಳಿಕೆ | ಆತಂಕದಲ್ಲಿ ರೈತಾಪಿ ವರ್ಗ

ಸಿ.ಎಸ್. ನಾರಾಯಣಸ್ವಾಮಿ ಹೊಸಕೋಟೆ

ಕರೋನಾ ಸೋಂಕಿನ ಎರಡನೇ ಅಲೆಯ ಅಬ್ಬರದ ಕಡಿವಾಣಕ್ಕೆ ರಾಜ್ಯದಲ್ಲಿ ಟಫ್ ರೂಲ್ ಜಾರಿ ಆಗುತ್ತಿದ್ದಂತೆ ರೇಷ್ಮೆ ಗೂಡಿನ ಬೆಲೆ ದಿಢೀರ್ ಕುಸಿದಿದೆ.

ಪ್ರತಿ ಕೆಜಿ ರೇಷ್ಮೆಗೂಡಿನ ಧಾರಣೆಯಲ್ಲಿ 100 ರು. ಕುಸಿತ ಕಂಡಿದೆ. ಕರೋನಾ ಕಡಿವಾಣಕ್ಕೆ ಟಫ್ ರೂಲ್ ಜಾರಿ ಆಗುವುದಕ್ಕೂ ಮುನ್ನ 450ಕ್ಕೂ ಹೆಚ್ಚು ಇದ್ದ ರೇಷ್ಮೆಗೂಡಿನ ಗರಿಷ್ಠ ಬೆಲೆ ಇದೀಗ 350 ಕ್ಕೆ ಕುಸಿದಿದೆ. ಗರಿಷ್ಠ ಬೆಲೆಯಷ್ಟೆ ಅಲ್ಲ ಸರಾಸರಿ ಬೆಲೆಯಲ್ಲೂ 100 ರು.ಗಳ ಆಸುಪಾಸಿನ ಬೆಲೆ ಕುಸಿದಿದೆ.

ಕೃಷಿ ಕ್ಷೇತ್ರಕ್ಕೆ ಟಫ್ ರೂಲ್ಸ್‌ನಂತಹ ಯಾವುದೇ ಆಡ್ಡಿ ಆತಂಕ ಇಲ್ಲ. ಹಾಗಾಗಿ ಎಂದಿನಂತೆ ರೇಷ್ಮೆ ಹುಳು ಸಾಕಾಣಿಕೆ, ರೇಷ್ಮೆಗೂಡು, ಉತ್ಪಾದನೆ ಕಾರ್ಯ ಮುಂದುವರಿದಿದೆ. ಆದರೆ ರೇಷ್ಮೆ ನೂಲು ಹಾಗೂ ರೇಷ್ಮೆ ನೂಲಿನ ಉತ್ಪನ್ನಗಳು ಬೇಡಿಕೆ ಕಳೆದುಕೊಂಡಿವೆ. ಈ ಹಿನ್ನೆಲೆಯಲ್ಲಿ ರೇಷ್ಮೆನೂಲನ್ನು ಖರೀದಿಸುವ ಉದ್ದಿಮೆದಾರರು ಸದ್ಯಕ್ಕೆ ನೂಲನ್ನು ಖರೀದಿಸುತ್ತಿಲ್ಲ. ಇನ್ನೊಂದು ಕಡೆ ಬಂಡವಾಳ ಶಾಹಿಗಳು ರೇಷ್ಮೆನೂಲನ್ನು ಆಡವಿಟ್ಟುಕೊಂಡು ಸಾಲ ನೀಡುವ ಚಟುವಟಿಕೆಗಳಿಗೂ ತಾತ್ಕಾಲಿಕ ಬ್ರೇಕ್ ಹಾಕಿದ್ದಾರೆ.

ಇದರಿಂದ ರೇಷ್ಮೆನೂಲು ಬಿಚ್ಚಾಣಿಕೆದಾರರು ತೆಗೆದ ನೂಲು ಮಾರಾಟವಾಗದೆ ಮನೆಯಲ್ಲೆ ಉಳಿಯುವಂತಾಗಿದೆ. ಇದರಿಂದ ಸಹಜವಾಗಿಯೆ ಡೀಲರ್‌ಗಳ ಬಳಿ ಹಣದ ಕೊರತೆ ಎದುರಾಗಿದೆ. ರೇಷ್ಮೆಗೂಡನ್ನು ಖರೀದಿಸುವ ಶಕ್ತಿ ಕುಸಿದಿದೆ. ರೇಷ್ಮೆಗೂಡು ಬೆಳೆದಿರುವ ರೈತರನ್ನು ನಿರಾಶೆ ಕಾಡತೊಡಗಿದೆ . ಬೆಲೆ ಕುಸಿತದ ಬರೆ ಬೀಳತೊಡಗಿದೆ.



ರೇಷ್ಮೆಗೂಡಿನ ಬೆಲೆ ದಾಖಲು

ಟಫ್ ರೂಲ್ಸ್ ಜಾರಿ ಆಗುವುದಕ್ಕೂ ಮುನ್ನ ಏ.19 ರಂದು ಪ್ರತಿ ಕೆಜಿ ರೇಷ್ಮೆಗೂಡಿಗೆ ಗರಿಷ್ಠ ಬೆಲೆ 497 ಇದ್ದರೆ , 20ರಂದು 476 ರೂ, 21ರಂದು 470 ರು. 22ರಂದು 485 ರು, 23ರಂದು 425 ರು, 24ರಂದು 400 ರು, 25ರಂದು 400 ರು, 26ರಂದು 450 ರು, 27ರಂದು ರು, 28ರಂದು 393 ರು, 29ರಂದು 382 ರು ಗಳಾಗಿತ್ತು. ಸದಾಸರಿ ಬೆಲೆಯನ್ನು ಗಮನಿಸಿದರೆ ಏ.19ರಂದು 367 ರು, 20ರಂದು 378 ರು, 21ರಂದು 383 ರು, 22 ರಂದು 381 ರು, 23ರಂದು 352 ರು, 24 ರಂದು 333 ರು, 25ರಂದು 331 ರು, 26 ರಂದು 334 ರು, 27ರಂದು 314 ರು, 28ರಂದು 278 ರು, 29ರಂದು 270 ರು, ನಷ್ಟು ಬೆಲೆ ದಾಖಲಾಗಿದೆ.

ನಮ್ಮಲ್ಲಿನ ಕೊಳವೆ ಬಾವಿಯಲ್ಲಿನ ನೀರಿನ ಪ್ರಮಾಣ ಬೇಸಿಗೆ ಕಾಲದ ಕಾರಣಕ್ಕಾಗಿ ಕುಸಿದಿದೆ. ಹಾಗಾಗಿ ಸ್ವಲ್ಪ ಪ್ರಮಾಣದ ಹಿಪ್ಪುನೇರಳೆ ಸೊಪ್ಪನ್ನು ಖರೀದಿ ಮಾಡಿ ರೇಷ್ಮೆಗೂಡು ಬೆಳೆದು ಮಾರುಕಟ್ಟೆಗೆ ಹೋದರೆ ನನ್ನ ಗೂಡು 278 ರೂ.ಗೆ ಮಾರಾಟವಾಗಿದೆ. ಖರ್ಚಿಲ್ಲಾ ಕಳೆದು ಇನ್ನೂ 1500 ರು. ಕೈಯಿಂದ ಹಾಕಬೇಕಿದೆ. ಇದು ನನ್ನಂತ ಎಲ್ಲ ರೈತರ ಗೋಳಾಗಿದೆ.

- ರಘುನಾಥ್ ರೇಷ್ಮೆಗೂಡು ಬೆಳೆದ ರೈತ

ನಾವು ರೇಷ್ಮೆಗೂಡನ್ನು ಖರೀದಿಸಲು ಸಿದ್ದರಿದ್ದೇವೆ. ಆದರೆ ನಮ್ಮಲ್ಲಿನ ರೇಷ್ಮೆನೂಲನ್ನು ಖರೀದಿಸುವವರು ಇಲ್ಲ. ಹೋಗಲಿ ಟಫ್ ರೂಲ್ಸ್ ಮುಗಿದ ಮೇಲೆ ಮಾರಾಟ ಮಾಡಿದರಾಯ್ತು ಎಂದು ರೇಷ್ಮೆನೂಲನ್ನು ದಾಸ್ತಾನು ಮಾಡಲು ಬಂಡವಾಳದ ಹಣಕಾಸಿನ ಕೊರತೆ ಇದೆ. ಬಹುತೇಕ ರೀಲರುಗಳು ಆಯಾ ದಿನದ ನೂಲನ್ನು ಮಾರಾಟ ಮಾಡಿ ಆದರಿಂದ ಬರುವ ಹಣದಲ್ಲಿ ರೇಷ್ಮೆಗೂಡನ್ನು ಖರೀದಿಸುವವರೆ ಹೆಚ್ಚು. ರೇಷ್ಮೆನೂಲನ್ನು ಆಡ ಇಟ್ಟುಕೊಂಡು ಸಾಲ ಕೊಡುವವರೂ ಇದೀಗ ಕೊಡುತ್ತಿಲ್ಲ.

-ಶರೀಫ್ ಡೀಲರ್ ಸೂಲಿಬೆಲೆ

ಟಫ್ ರೂಲ್ಸ್‌ಗೆ ಕುಸಿದ ರೇಷ್ಮೆ ಬೆಲೆ

ಇದೀಗ ಬೇಸಿಗೆ ಕಾಲವಾದ್ದರಿಂದ ಸಾಮಾನ್ಯವಾಗಿ ಕೊಳವೆ ಬಾಗಳಲ್ಲಿಯೂ ಅಂತರ್ಜಲ ಮಟ್ಟ ಕುಸಿತ ಕಾಣುವುದು ಸಹಜ . ಹಾಗಾಗಿ ಹಿಪ್ಪುನೇರಳೆ ಬೆಳೆಯುವ ಪ್ರಮಾಣವೂ ಕಡಿಮೆ ಆಗಿ ಸೊಪ್ಪಿನ ಬೆಲೆಯೂ ಹೆಚ್ಚಲಿದೆ. ಇದೆ ಸಮಯದಲ್ಲಿ ಬೇರೆಲ್ಲಾ ವರ್ಷಗಳಲ್ಲಿ ರೇಷ್ಮೆಗೂಡಿನ ಬೆಲೆಯೂ ಆಧಿಕವಾಗಿರುತ್ತಿದ್ದು ರೇಷ್ಮೆಗೂಡು ಬೆಳೆಯುತ್ತಿದ್ದ ರೈತನ ಕೈ ತುಂಬಾ ಸಾಕಷ್ಟು ಹಣ ಸಿಗುತ್ತಿತ್ತು. ಆದರೆ ಈ ವರ್ಷ ಕರೋನಾ ನಿಯಂತ್ರಣಕ್ಕೆ ಟಫ್ ರೂಲ್ಸ್, ರೇಷ್ಮೆಗೂಡಿನ ಬೆಲೆಯನ್ನು ರೈತನಿಗೆ ಒಂದಷ್ಟು ಕಾಸು ಸಿಗುತ್ತಿದ್ದ ಆಸೆಯನ್ನು ಕುಸಿದಿದೆ.